| Form No.4 (Civil)<br>Deposition Sheets<br>(R.P.No.57) |
|---|

## ವಿಶೇಷ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆಃ 102/2017

ಪ್ರಾ.ಸಾ. 1 ಚಾ.ಸಾ. 1

| | |
|---|---|
| ಸಾಕ್ಷಿದಾರರ ಹೆಸರು | : ಮರೆಮ್ಮ |
| ಗಂಡನ ಹೆಸರು | : ಮಲ್ಲಪ್ಪ ಗುರಪ್ಪನವರ |
| ವಯಸ್ಸು | 35 ವರ್ಷಗಳು |
| ಉದ್ಯೋಗ | : ಮನೆಕೆಲಸ |
| ವಾಸ | : ಬಳಿಚಕ್ರ |

ಪ್ರಮಾಣವಚನ ಬೋಧಿಸಿದ ದಿನಾಂಕಃ 17-12-2020

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ಚಾಸಾ-4 ಶಂಕ್ರಮ್ಮ ನನ್ನ ಅತ್ತೆ, ಚಾಸಾ-5 ಬಸಮ್ಮ ನನ್ನ ತಾಯಿ. ನಾವು ಮಾದಿಗ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದಿರುವ 03 ಜನ ಆರೋಪಿತರು ಗೊತ್ತು, ಆರೋಪಿತರು ಕಬ್ಬಲಿಗ ಜಾತಿಗೆ ಸೇರಿದವರು ಇದ್ದಾರೆ.

2. ಈಗ್ಗೆ ಮೂರು ವರ್ಷದ ಹಿಂದೆ ಮದ್ಯಾಹ್ನ 12.00 ಗಂಟೆಗೆ ಬಳಿಚಕ್ರ ಗ್ರಾಮದ ನಮ್ಮ ಹೊಲದಲ್ಲಿ ಗಲಾಟೆ ಆಗಿದೆ. ನಾನು, ನನ್ನ ಚಾಸಾ-5 ನನ್ನ ತಾಯಿ ಮತ್ತು ನನ್ನ ಚಾಸಾ-4 ನನ್ನ ಅತ್ತೆ ಹೊಲದಲ್ಲಿ ಕುಳಿತಿದ್ದೆವು. ಆಗ ಮೂರು ಜನ ಆರೋಪಿತರು ನಾವು ಕುಳಿತ ಜಾಗಕ್ಕೆ ಬಂದು ಮಾದಿಗ ಸೂಳೇ ಮಕ್ಕಳೇ ಈ ಹೊಲದಲ್ಲಿ ಯಾಕೆ ಕುಳಿತುಕೊಂಡಿದ್ದೀರಿ ಅಂತಾ ಜಾತಿ ಎತ್ತಿ ಬೈದಿದ್ದಾರೆ.

3. 1ನೇ ಆರೋಪಿ ನರಸಿಂಗಪ್ಪ ನನಗೆ ಎಡಗೈ ಮತ್ತು ನನ್ನ ಹಣೆಯ ಮೇಲೆ ಹೊಡೆದಿದ್ದಾನೆ. ಆಗ ನನ್ನ ಅತ್ತೆ ಶಂಕ್ರಮ ಜಗಳ ಬಿಡಿಸಲು ಬಂದಾಗ ಆರೋಪಿ ನರಸಪ್ಪ ನನ್ನ ಅತ್ತೆಗೆ ಹೊಡೆದಿದ್ದಾನೆ. ನಾವು ಬೇವೂಷ ಆಗಿ ಬಿದ್ದಾಗ ನಮ್ಮನ್ನು ಅಂಬುಲೆನ್ಸನಲ್ಲಿ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ಅಲ್ಲಿಗೆ ಪೋಲೀಸರು ಬಂದು ನನ್ನ ಹೇಳಿಕೆ ದೂರನ್ನು

ಪಡೆದುಕೊಂಡಿದ್ದಾರೆ. ಅದಕ್ಕೆ ನಾನು ನನ್ನ ಹೆಬ್ಬೆಟ್ಟಿನ ಗುರುತು ಹಾಕಿದ್ದೇನೆ. ಸದರಿ ಹೇಳಿಕೆಯನ್ನು ನಿಪಿ-1 ಅಂತಾ ಗುರುತುಮಾಡಲಾಯಿತು. ಸಾಕ್ಷಿ ಕೋರ್ಟಿನ ಮುಂದೆ ಕಲ್ಲನ್ನು ನೋಡಿ ಗುರುತು ಮಾಡಿದ್ದು ಅದನ್ನು ಮುಮಾ-1 ಅಂತಾ ಗುರುತುಮಾಡಲಾಯಿತು.

(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆಯನ್ನು ಪರಿಶೀಲನೆ ಮಾಡಿ ಪಾಟೀ ಸವಾಲು ಮಾಡಲು ಅನುಮತಿ ಕೊಟ್ಟಿದೆ)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ

4. ಆ ದಿವಸ 1ನೇ ಆರೋಪಿ ನರಸಿಂಗಪ್ಪ ನನ್ನ ಎಡಗೈ ಹಿಡಿದು ದರದರನೇ ಎಳೆದುಕೊಂಡು ಹೋದ ಎಂದರೆ ಸರಿ. ಅದರಿಂದ ನನಗೆ ಅವಮಾನ ಆಯಿತು ಎಂದರೆ ಸರಿ. 3ನೇ ಆರೋಪಿ ಮಲ್ಲಿಕಾರ್ಜುನ ಈ ಮಾದಿಗ ಸೂಳೆಯರಿಗೆ ಬಹಳ ಸೊಕ್ಕು ಬಂದಿದೆ ಜೀವ ಸಹಿತ ಹೊಡೆಯಿರಿ ಅಂತಾ ಜೀವದ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ. 2ನೇ ಆರೋಪಿ ಈಶಪ್ಪ ಕೈಯಿಂದ ನನ್ನ ಅತ್ತೆ ಶಂಕ್ರಮ್ಮಗೆ ಬಲ ಭುಜದ ಕೆಳಗೆ ಬೆನ್ನಿನ ಭಾಗಕ್ಕೆ ಹೊಡೆದಿದ್ದಾನೆ ಎಂದರೆ ಸರಿ. ಸದರಿ ಘಟನೆ ಬಳಿಚಕ್ರ ಗ್ರಾಮದ ಸರ್ವೆ ಸಂಃ 171/ಎ ರಲ್ಲಿ ಆಗಿದೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್‌ಬಿಪಿ ವಕೀಲರಿಂದ ಃ

5. ನಮ್ಮ ಹೊಲ ನಮ್ಮ ಮಾವ ಭೀಮರಾಯನ ಹೆಸರಿನಲ್ಲಿ ಇದೆ. ಅದು 06 ಎಕರೆ ಇದೆ. ಆ ಹೊಲ ನಮಗೆ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು 03 ಎಕರೆ ಹೊಲ ಖರೀದಿ ಮಾಡಿದ್ದೇವೆ ಉಳಿಕೆ 03 ಎಕರೆ ಮಾರ್ಟಗೇಜ್ ಮಾಡಿಕೊಂಡಿಸಿದ್ದೆವೆ ಅಂತಾ ಹೇಳುತ್ತಾರೆ. ಆ 03 ಎಕರೆ ಹೊಲ ನನ್ನ ಹೆಸರಿಗೆ ನೊಂದಣಿ ಆಗಿಲ್ಲ. ಉಳಿಕೆ 03 ಎಕರೆಯನ್ನು 40 ವರ್ಷಗಳ ಹಿಂದೆ ಒತ್ತೆ ಮಾಡಿಸಿಕೊಂಡಿದ್ದೇವೆ. ಅದು ಕೂಡಾ ನೊಂದಣಿ ಆಗಿಲ್ಲ. ಪಹಣಿಯಲ್ಲಿ ನಮ್ಮ ಹೆಸರು ನಮೂದು ಆಗಿದೆ.

6. ಆ ಹೋಲದಲ್ಲಿ 05 ಎಕರೆ ಹೊಲವನ್ನು ಭೀಮರಾಯ ನಮ್ಮ ಹೆಸರಿಗೆ ಸ್ವಾಧೀನ ರಹಿತ ಮಾರ್ಟಗೇಜ್ ಮಾಡಿದ್ವಾನೆ ಎಂದರೆ ಸರಿ. ಹಣ ವಾಪಸ್ಸು ಪಡೆದುಕೊಂಡು ನಮ್ಮ ಹೊಲ ಬಿಟ್ಟುಕೊಡಿ ಅಂತಾ ಭೀಮರಾಯ ನಮ್ಮನ್ನು ಕೇಳಿದ್ದಾರೆ ಎಂದರೆ ಸರಿಯಲ್ಲ. ಆ ಹೊಲ ನಾವು ಬಿಟ್ಟು ಕೊಡದೇ ಇದಿದ್ದರಿಂದ ಭೀಮರಾಯ ಕೇಸ್ ಹಾಕಿದ್ವಾನೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯನ್ನು ಭೀಮರಾಯ ಓ.ಎಸ್ ಸಂಃ 333/2013 ರಲ್ಲಿ ದಾವೆ ಹಾಕಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆ ಭೀಮರಾಯನ ಪರವಾಗಿ ಆಯಿತು ಎಂದರೆ ನನಗೆ ಗೊತ್ತಿಲ್ಲ.

7. ಆ ಪೂರ್ಣ 06 ಎಕರೆ ಹೋಲವನ್ನು 2ನೇ ಆರೋಪಿ ಈಶಪ್ಪ ಖರೀದಿ ಮಾಡಿದ್ವಾನೆ ಎಂದರೆ ನನಗೆ ಗೊತ್ತಿಲ್ಲ. ದಿಃ 18.12.2015 ರಂದು 2ನೇ ಆರೋಪಿ ಈಶಪ್ಪ ಭೀಮರಾಯನ ಕಡೆಯಿಂದ 06 ಎಕರೆ ಹೊಲವನ್ನು ಖರೀದಿ ಮಾಡಿದ್ವಾನೆ ಎಂದರೆ ನನಗೆ ಗೊತ್ತಿಲ್ಲ. ಆ 06 ಎಕರೆ ಹೊಲದಲ್ಲಿ 2ನೇ ಆರೋಪಿ ಈಶಪ್ಪ ಮಾಲೀಕನಾಗಿ ಸ್ವಾಧೀನ ಇದ್ವಾನೆ ಎಂದರೆ ಸರಿಯಲ್ಲ.

8. ಈ ವಿಚಾರದಲ್ಲಿ ನನ್ನ ಗಂಡ ಚಾಸಾ-8 ಮಲ್ಲಪ್ಪ 2ನೇ ಆರೋಪಿ ಈಶಪ್ಪ ಮತ್ತು ಭೀಮರಾಯ ಇವರ ಮೇಲೆ ಓ ಎಸ್ ಸಂಃ 218/16 ರಲ್ಲಿ ದಾವೆ ಮಾಡಿದ್ದಾರೆ ಎಂದರೆ ಸರಿ. ನನ್ನ ಗಂಡ ಮಾಡಿದ ಕೇಸ್ ಆತನ ವಿರುದ್ದ ತೀರ್ಮಾನ ಆಯಿತು ಎಂದರೆ ನನೆಗ ಗೊತ್ತಿಲ್ಲ. ಈ ಸಂಬಂಧ ನಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಯ ಇದೆ ಎಂದರೆ ಸರಿ. ನನ್ನ ಮೇಲೆ, ನನ್ನ ಗಂಡನ ಮೇಲೆ ಮತ್ತು ಸಂಬಂಧಿಕರ ಮೇಲೆ ಸಿಆರ್‌ಪಿಸಿ ಕಲಂ 107ರಡಿಯಲ್ಲಿ ಪೋಲೀಸರು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ.

9. ನನ್ನ ಗಂಡ ಆರೋಪಿತರ ಹೊಲದಲ್ಲಿ ಗಿಡಗಳನ್ನು ಕಡೆದಿದ್ದರಿಂದ ಮತ್ತು ಶೆಂಗಾ ಬಿತ್ತನೆ ಮಾಡಿದ್ದರಿಂದ ಆತನ ವಿರುದ್ದ ಆರೋಪಿತರು ಕ್ರಿಮಿನಲ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ಸದರಿ ಹೊಲವನ್ನು ಸರ್ಕಾರದವರು ವಶಪಡಿಸಿಕೊಂಡರು ಎಂದರೆ ಸರಿ.

10. ನಾನು, ನನ್ನ ಅತ್ತೆ ಮತ್ತು ನನ್ನ ತಾಯಿ ಘಟನೆ ಆಯಿತು ಅಂತಾ ಹೇಳುವ ಹೊಲದಲ್ಲಿ ಇದ್ದೆವು ಎಂಬ ಮಾತು ಸುಳ್ಳು ಎಂದರೆ ಸರಿಯಲ್ಲ. ಆ ಜಾಗಕ್ಕೆ ಆರೋಪಿತರು ಬಂದು ನಮ್ಮನ್ನು

ಅವಾಚ್ಯ ಶಬ್ದಗಳಿಂದ ಬೈದು ಮತ್ತು ಜಾತಿ ನಿಂದನೆ ಮಾಡಿದರು ಅಂತಾ ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿತರು ನಮಗೆ ಬೈದಿಲ್ಲಾ ಮತ್ತು ಹೊಡೆದಿಲ್ಲಾ ಎಂದರೆ ಸರಿಯಲ್ಲ. ಹೊಲದ ವಿಚಾರದ ವೈಮನಸ್ಸಿನಿಂದ ನಾವು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

11. ನನ್ನ ತಾಯಿ ಬಸಮ್ಮ ಹತ್ತಿರ ಫೋನ್ ಇಲ್ಲಾ. ನನ್ನ ಹತ್ತಿರ ಕೂಡಾ ಫೋನ್ ಇಲ್ಲಾ. ಭೀಮರಾಯ ಹತ್ತಿರ ಫೋನ್ ಇದೆ ಅಂದರೆ ನನಗೆ ಗೊತ್ತಿಲ್ಲ. ನನಗೂ ಮತ್ತು ನನ್ನ ತಾಯಿಗೆ 108 ಅಂಬೂಲೆನ್ಸನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಅಂತಾ ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆಂದರೆ ಸರಿಯಲ್ಲ.

12. ಆಲ್ಲಿ ನಾನು, ನನ್ನ ತಾಯಿ ಮತ್ತು ಅತ್ತೆ ಮಾತ್ರ ಇದ್ದೆವು. ನಾವು ಆಸ್ಪತ್ರೆಗೆ 1.00 ಗಂಟೆಗೆ ಹೋಗಿದ್ದೆವೆ. ನಾವು ಆಸ್ಪತ್ರೆಯಲ್ಲಿ ಎರಡು ದಿನ ಇದ್ದೆವು. ಪೋಲೀಸರು ನಮ್ಮ ಹೇಳಿಕೆಯನ್ನು ಅದೇ ದಿವಸ ಮದ್ಯಾಹ್ನ ಪಡೆದಿದ್ದಾರೆ. ಅದರಲ್ಲಿ ಏನು ಬರೆದಿದ್ದಾರೆ ಅಂತಾ ನಮಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ಮುಮಾ-1 ಅಂತಾ ಕಲ್ಲುಗಳು ಎಲ್ಲಿಬೇಕಾದರೂ ಸಿಗುತ್ತವೆ ಎಂದರೆ ಸರಿ. ನಮಗೆ ಆರೋಪಿತರು ಹೊಡೆದಿಲ್ಲ, ಬೈದಿಲ್ಲ ಅಂದರೆ ಸರಿಯಲ್ಲ. ಜಾತಿ ನಿಂದನೆ ಮಾಡಿಲ್ಲಾ ಎಂದರೆ ಸರಿಯಲ್ಲ. ಆದರೂ ಕೂಡಾ ನಾವು ಆರೋಣಪಿತರ ವಿರುದ್ದ ಸುಳ್ಳು ಫಿರ್ಯಾದು ಕೊಟ್ಟು ಸುಳ್ಳು ಸಾಕ್ಷ್ಯಕೊಟ್ಟಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

Form No.4 (Civil)
Deposition Sheets
(R.P.No.57)

## ವಿಶೇಷ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆಃ 102/2017

ಪ್ರಾ.ಸಾ. 2 ಚಾ.ಸಾ. 2

| | | |
|---|---|---|
| ಸಾಕ್ಷಿದಾರರ ಹೆಸರು | : | ಸಾಬಣ್ಣ |
| ತಂದೆಯ ಹೆಸರು | : | ಹಣಮಂತ ಮೇಟಿ |
| ವಯಸ್ಸು | | 45 ವರ್ಷಗಳು |
| ಉದ್ಯೋಗ | : | ಒಕ್ಕಲುತನ |
| ವಾಸ | : | ಬಳಿಚಕ್ರ |

ಪ್ರಮಾಣವಚನ ಬೋಧಿಸಿದ ದಿನಾಂಕಃ 17-12-2020

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ಚಾಸಾ-3 ನಾಗಪ್ಪ ನನಗೆ ಗೊತ್ತು. ಚಾಸಾ-3 ನಾಗಪ್ಪ ಈಗ ತೀರಿಕೊಂಡಿದ್ದಾನೆ.

2. ಜಗಳ ಆದ ಬಗ್ಗೆ ನನಗೆ ಗೊತ್ತಿಲ್ಲ. ಪೋಲೀಸರು ಸಹಿ ಮಾಡು ಅಂತಾ ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ.

3. ಸಾಕ್ಷಿ ಕೋರ್ಟಿನ ಮುಂದೆ ಗುನ್ಹಾ ಜಾಗೆಯ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತುಮಾಡಿದ್ದು, ಪಂಚನಾಮೆಯನ್ನು ಈಗ ನಿಪಿ-2 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತಾ ಗುರುತುಮಾಡಲಾಯಿತು. ನಿಪಿ-2ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ

4. ದಿಃ 12.03.2017 ರಂದು ಬೆಃ 9.00 ರಿಂದ 10.00 ವರೆಗೆ ನನ್ನನ್ನು ಮತ್ತು ಚಾಸಾ-3 ರವರನ್ನು ಬಳಿಚಕ್ರ ಗ್ರಾಮದ ಸರ್ವೇ ಸಂಃ 171/ಎ ಇಲ್ಲಿಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಆರೋಪಿತರು ಮರೆಮ್ಮ ಮತ್ತು ಶಂಕ್ರಮ್ಮ ಇವರಿಗೆ ಹೊಡೆದ ಜಾಗದಲ್ಲಿ ಪೋಲೀಸರು ಪಂಚನಾಮೆ

ಮಾಡಿದ್ದಾರೆ ಎಂದರೆ ಸರಿಯಲ್ಲ. ಗುನ್ನಾ ಜಾಗವನ್ನು ಚಾಸಾ-6 ಸಾಬಮ್ಮ ತೋರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಪೋಲೀಸರು ಒಂದು ಕಲ್ಲನ್ನು ಮುಮಾ-1 ರಂತೆ ಅಮಾನತ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಗುನ್ನಾ ಜಾಗೆಯಲ್ಲಿ ನಿಪಿ-2 ರಂತೆ ಪಂಚನಾಮೆ ಮಾಡಿ ಮುಮಾ-1 ಕಲ್ಲನ್ನು ಅಮಾನತ್ತು ಮಾಡಿದ್ದರೂ ಕೂಡಾ ಘಟನೆ ಬಗ್ಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡಾ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್‌ಬಿಪಿ ವಕೀಲರಿಂದ ಃ</u>

ಆರೋಪಿತರ ಪರ ವಕೀಲರು ಹಾಜರು ಇದ್ದು ಪಾಟೀ ಸವಾಲು ಇಲ್ಲಾ ಅಂತಾ ಹೇಳುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.